# ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ



ಸೆಪ್ಟೆಂಬರ್ 5ರಂದು ಇಡೀ ರಾಜ್ಯವನ್ನು ಬೆಚ್ಚಿ ಬೀಳಿಸಿದ ಘಟನೆ ನಡೆಯಿತು. ಪ್ರಖರ ವಿಚಾರವಾದಿ, ಜನಪರ ಕಳಕಳಿಯ ಹಿರಿಯ ಪತ್ರಕರ್ತೆ ಗೌರಿ ಲಂಕೇಶ್ ಅವರನ್ನು ದುಷ್ಕರ್ಮಿಗಳು ಗುಂಡಿಟ್ಟು ಹತ್ಯೆ ಮಾಡಿದರು. ಮೈ ನಡುಗಿಸುವ ಈ ಕೊಲೆಪಾತಕ ಕರ್ನಾಟಕ ಮಾತ್ರವಲ್ಲದೇ ಇಡೀ ದೇಶದಲ್ಲಿ, ವಿದೇಶದಲ್ಲಿ ಖಂಡನೆಗೆ ಗುರಿಯಾಯಿತು.

ಕರ್ನಾಟಕದಲ್ಲಿ ಒಂದೂವರೆ ದಶಕಗಳಿಂದ ನಡೆದ ಎಲ್ಲ ಪ್ರಗತಿಪರ ಹೋರಾಟಗಳಲ್ಲಿ ಮುಂಚೂಣಿಯಲ್ಲಿದ್ದ, ಹಿಂಸಾ ಹಾದಿ ಹಿಡಿದಿದ್ದ ನಕ್ಸಲರನ್ನು ಮುಖ್ಯವಾಹಿನಿಗೆ ಕರೆತರಲು ಶ್ರಮಿಸಿದ್ದ, ಕೋಮುವಾದಿಗಳ ಅಟ್ಟಹಾಸವನ್ನು ಏರು ಗಂಟಲಿನಲ್ಲಿ ಖಂಡಿಸುತ್ತಿದ್ದ ಗೌರಿ ಹತ್ಯೆ ನಾಡನ್ನು ದಿಗ್ಭ್ರಮೆಗೆ ತಳ್ಳಿತು. ನಾನೂ ಗೌರಿ ಎಂದು ಹೇಳಿಕೊಂಡು ಸಹಸ್ರಾರು ಜನ ಬೀದಿಗಿಳಿದು ಹೋರಾಟ ನಡೆಸಿದರು. ದೇಶದ ನಾನಾ ದಿಕ್ಕುಗಳಿಂದ ರಾಜ್ಯಕ್ಕೆ ದೌಡಾಯಿಸಿದ ಜನ ಪ್ರತಿಭಟನೆಯಲ್ಲಿ ಪಾಲ್ಗೊಂಡು, ಗೌರಿ ನಡೆಸಿದ್ದ ಹೋರಾಟಗಳನ್ನು ಮುಂದುವರಿಸುತ್ತೇವೆ ಎಂದು ಪಣತೊಟ್ಟರು.

ಗೌರಿ ಹಂತಕರ ಸುಳಿವು ಸಿಕ್ಕಿದೆ, ಇನ್ನೇನು ಬಂಧಿಸಿದ್ದೇವೆ ಎಂದು ಹೇಳುತ್ತಲೇ ಬಂದಿರುವ ಗೃಹ ಇಲಾಖೆ, ಮೂರು ತಿಂಗಳನ್ನು ಪೂರೈಸಿದೆ. ಹಂತಕರ ಪತ್ತೆಯಾಗಿಲ್ಲ. ಗೌರಿ ಒಡನಾಡಿಗಳ ಒಡಲಾಳದ ನೋವು ಮರೆಯಾಗಿಲ್ಲ.

ಲಾಗಾಯ್ತಿನಿಂದ ಚಾಲ್ತಿಯಲ್ಲಿದೆ. ಚಂಪಾ ಹೇಳಿಕೆಯು ಸಾಹಿತ್ಯ ವೇದಿಕೆಗಳಲ್ಲಿ ರಾಜಕೀಯ ಮಾತನಾಡಬೇಕೇ ಬೇಡವೇ ಎಂಬ ಚರ್ಚೆಗೆ ದಾರಿ ಮಾಡಿಕೊಟ್ಟಿದ್ದಂತೂ ಸತ್ಯ.

## ಊನಾ ಮಾದರಿ ಚಳವಳಿ

ಗುಜರಾತ್ ಊನಾದಲ್ಲಿ ದಲಿತರ ಮೇಲೆ ನಡೆದ ಕ್ರೌರ್ಯವನ್ನು ಖಂಡಿಸಿ ಜಿಗ್ನೇಶ್ ಮೆವಾನಿ ನಡೆಸಿದ ಹೋರಾಟ ದೇಶದಲ್ಲಿ ಹೊಸ ಸಂಚಲನ ಮೂಡಿಸಿತು. ಕರ್ನಾಟದಲ್ಲಿರುವ ಪ್ರಗತಿಪರರು, ಹೊಸ ಮಾದರಿಯಲ್ಲಿ ದಲಿತ ಚಳವಳಿಯನ್ನು ಸಂಘಟಿಸುವ ಈ ತಲೆಮಾರಿನ ಯುವಕರ ಪಡೆ ಕರ್ನಾಟಕದಲ್ಲೂ ಇಂತಹದೇ ಚಳವಳಿಯ ಕಿಚ್ಚು ಹಚ್ಚಿ, ದಲಿತರಲ್ಲಿ ಸ್ವಾಭಿಮಾನ ಮೂಡಿಸುವ ಯತ್ನ ನಡೆಸಿದರು. ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯ ಖಂಡಿಸಿ ಬೆಂಗಳೂರಿನಿಂದ ಹಾಸನ, ಚಿಕ್ಕಮಗಳೂರು ಮಾರ್ಗವಾಗಿ ಉಡುಪಿ ಚಲೋ ನಡೆಸಿತು. ಉಡುಪಿಯಲ್ಲಿ ಸಹಪಂಕ್ತಿ ಭೋಜನಕ್ಕೆ ಅವಕಾಶ ನೀಡಬೇಕು ಎಂದು ಆಗ್ರಹಿಸಿ ನಡೆದ ಕಾರ್ಯಕ್ರಮದಲ್ಲಿ ಜಿಗ್ನೇಶ್ ಮೆವಾನಿ ಪಾಲ್ಗೊಂಡು, ಯುವಕರಲ್ಲಿ ಹೊಸ ಹುಮ್ಮಸ್ಸು ತುಂಬಿದರು.

ಕೊಡಗು ಜಿಲ್ಲೆ ಮಡಿಕೇರಿ ದಿಡ್ಡಳ್ಳಿಯಲ್ಲಿ ನಡೆದ ಆದಿವಾಸಿಗಳು ಭೂಮಿಯ ಹಕ್ಕಿಗಾಗಿ ನಡೆಸಿದ ಹೋರಾಟ ವಿಧಾನಸೌಧಕ್ಕೂ ತಲುಪಿದ್ದು ಒಂದು ಇತಿಹಾಸ. ನಕ್ಸಲ್ ಚಳವಳಿಯಿಂದ ಹೊರಬಂದಿರುವ ನೂರ್ ಶ್ರೀಧರ್, ಸಿರಿಮನೆ ನಾಗರಾಜ್ ನೇತೃತ್ವದಲ್ಲಿ ನಡೆದ ಹೋರಾಟದಲ್ಲಿ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಕೂಡ ಸಕ್ರಿಯವಾಗಿ ಭಾಗಿಯಾದರು. ಜಿಗ್ನೇಶ್ ಮೆವಾನಿ ಕೂಡ ಇದರಲ್ಲಿ ಪಾಲ್ಗೊಂಡಿದ್ದರು.

## ಚುನಾವಣೆ, ಐ.ಟಿ ದಾಳಿ

ವಿ. ಶ್ರೀನಿವಾಸ್ ಪ್ರಸಾದ್ ರಾಜೀನಾಮೆಯಿಂದ ತೆರವಾಗಿದ್ದ ನಂಜನಗೂಡು, ಎಚ್.ಎಸ್. ಮಹದೇವ ಪ್ರಸಾದ್ ನಿಧನದಿಂದ ತೆರವಾಗಿದ್ದ ಗುಂಡ್ಲುಪೇಟೆ ಕ್ಷೇತ್ರದಲ್ಲಿ ನಡೆದ ಉಪಚುನಾವಣೆಗಳು ಕೆಲವರ ರಾಜಕೀಯ ಲೆಕ್ಕಾಚಾರವನ್ನೇ ತಲೆ ಕೆಳಗು ಮಾಡಿದವು.

ಗುಜರಾತ್ ವಿಧಾನಸಭೆಯಿಂದ ರಾಜ್ಯಸಭೆಗೆ ನಡೆದ ಚುನಾವಣೆ ಇಡೀ ದೇಶದ ಗಮನ ಸೆಳೆದಿತ್ತು. ಸೋನಿಯಾಗಾಂಧಿ ರಾಜಕೀಯ ಕಾರ್ಯದರ್ಶಿ ಅಹ್ಮದ್ ಪಟೇಲ್ ಅವರನ್ನು ಸೋಲಿಸಲೇಬೇಕು ಎಂದು ಹಟಕ್ಕೆ ಬಿದ್ದಿದ್ದ ಬಿಜೆಪಿಯ ಅಮಿತ್ ಷಾ, ತಂತ್ರಗಾರಿಕೆ ಹೆಣೆದಿದ್ದರು. ಗುಜರಾತ್ ಕಾಂಗ್ರೆಸ್ ಅಧ್ಯಕ್ಷ ಶಂಕರಸಿಂಗ್ ವಘೇಲಾ ಸೇರಿದಂತೆ ಗುಜರಾತ್ ನ 20 ಶಾಸಕರು ರಾಜೀನಾಮೆ ನೀಡಿ, ಬಿಜೆಪಿ ಜತೆಗೆ ಸೇರಲು ಮುಂದಾಗಿದ್ದರು. ಇನ್ನೂ 40 ಶಾಸಕರನ್ನು ಸೆಳೆಯಲು ಅಮಿತ್ ಷಾ, ರಣತಂತ್ರ ರೂಪಿಸಿದ್ದರು. ಆ ಹೊತ್ತಿನಲ್ಲಿ ಅವರನ್ನೆಲ್ಲ ಕರ್ನಾಟಕಕ್ಕೆ ಕಳುಹಿಸಲು ಅಹ್ಮದ್ ಪಟೇಲ್ ತೀರ್ಮಾನಿಸಿದರು. ಬಿಡದಿ ಸಮೀಪದ ಈಗಲ್ ಟನ್ ರೆಸಾರ್ಟ್ ನಲ್ಲಿ ಇವರಿಗೆಲ್ಲ ರಕ್ಷಣೆ ನೀಡುವ ಜವಾಬ್ದಾರಿ ಇಂಧನ ಸಚಿವ ಡಿ.ಕೆ.ಶಿವಕುಮಾರ್ ಹೆಗಲೇರಿತು.

ಇದೇ ಹೊತ್ತಿನಲ್ಲಿ ರೆಸಾರ್ಟ್ , ಡಿ.ಕೆ. ಶಿವಕುಮಾರ್ ಮನೆ, ಕಚೇರಿ ಮೇಲೆ ಆದಾಯ ತೆರಿಗೆ(ಐ.ಟಿ) ಇಲಾಖೆ ಅಧಿಕಾರಿಗಳು ದಾಳಿ ನಡೆಸಿದರು. ದಾಳಿ ಪೂರ್ವ ನಿಯೋಜಿತ ಎಂದು ಐ.ಟಿ ಇಲಾಖೆ ಹೇಳಿತು. ಆದರೆ, ಇದು ಶಿವಕುಮಾರ್ ಬೆದರಿಸುವ ತಂತ್ರ ಎಂದೇ ಕಾಂಗ್ರೆಸ್ ಪ್ರತಿಪಾದಿಸಿತು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಂಸದೀಯ ಕಾರ್ಯದರ್ಶಿ ಕೆ. ಗೋವಿಂದರಾಜ್ ಮನೆಯಲ್ಲಿ ಐ.ಟಿ ದಾಳಿ ನಡೆಸಿದಾಗ ಸಿಕ್ಕಿದೆ ಎಂದು ಆರೋಪಿಸಲಾದ ಡೈರಿ ಕೂಡ ರಾಜಕೀಯ ವಲಯದಲ್ಲಿ ದೊಡ್ಡ ಸದ್ದು ಮಾಡಿತು. ಅದರಲ್ಲಿ ಇದೆ ಎನ್ನಲಾದ ಕೆಲವು ಸಂಕೇತಾಕ್ಷರಗಳು ರಾಹುಲ್ ಗಾಂಧಿ, ಎಐಸಿಸಿ ಖಜಾಂಚಿ ಮೋತಿಲಾಲ್ ವೋರಾ, ಕರ್ನಾಟಕದ ಸಚಿವರಾದ ಆರ್. ವಿ. ದೇಶಪಾಂಡೆ, ಎಂ.ಬಿ. ಪಾಟೀಲ, ಕೆ.ಜೆ. ಜಾರ್ಜ್, ಎಚ್.ಸಿ. ಮಹದೇವಪ್ಪ ಅವರದ್ದೇ ಎಂದು ಬಿಜೆಪಿ ಆರೋಪಿಸಿತು. ಇದು ಕೆಲವು ತಿಂಗಳು ಕಾಲ ಬಹುಚರ್ಚಿತವಾದ ವಿಷಯವಾಗಿತ್ತು.

## ಮಹದಾಯಿ ಕಣ್ಣೀರು

ಧಾರವಾಡ, ಗದಗ, ಬೆಳಗಾವಿ, ಬಾಗಲಕೋಟೆ, ವಿಜಯಪುರ ಜಿಲ್ಲೆಗಳಿಗೆ ನೀರು ಒದಗಿಸುವ ಮಹದಾಯಿ ಹೋರಾಟ ಕಳೆದ ಮೂರು ವರ್ಷಗಳಿಂದ ನಡೆಯುತ್ತಲೇ ಇದೆ. ಪದೆ ಪದೇ ರಾಜಕೀಯ ಚರ್ಚೆಯ ಕೇಂದ್ರ ಸ್ಥಾನಕ್ಕೆ ಇದು ಬಂದು ನಿಂತಿದ್ದೂ ಇದೆ.

ಮೂರು ರಾಜ್ಯಗಳು ಮಾತುಕತೆ ಮೂಲಕ ಬಗೆಹರಿಸಿಕೊಳ್ಳಿ ಎಂದು ನ್ಯಾಯಮಂಡಳಿ ಹೇಳಿದೆ. ಇದಕ್ಕೆ ಪೂರಕವಾಗಿ ಸಿದ್ದರಾಮಯ್ಯನವರು ಮಹಾರಾಷ್ಟ್ರ, ಗೋವಾ ಮುಖ್ಯಮಂತ್ರಿಗಳಿಗೆ ಪತ್ರವನ್ನೂ ಬರೆದಿದ್ದಾರೆ. ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಮೊನ್ನೆಮೊನ್ನೆಯವರೆಗೂ ಕರ್ನಾಟಕಕ್ಕೆ ಒಂದು ತೊಟ್ಟು ನೀರು ಬಿಡುವುದಿಲ್ಲ, ನ್ಯಾಯಮಂಡಳಿಯ ಮೂಲಕವೇ ತೀರ್ಮಾನವಾಗಲಿ ಎಂದು ಪ್ರತಿಪಾದಿಸುತ್ತಿದ್ದ ಗೋವಾದ ಮುಖ್ಯಮಂತ್ರಿ ಮನೋಹರ್ ಪರಿಕ್ಕರ್ ಅವರು ಅಮಿತ್ ಷಾ ಸೂಚನೆಯ ಮೇರೆಗೆ ಮಾತು ಬದಲಿಸಿದ್ದಾರೆ. ಮಾನವೀಯ ಕಳಕಳಿಯಿಂದ ಕುಡಿಯುವ ನೀರಿಗಾಗಿ ಮಾತ್ರ ಮಹದಾಯಿ ನೀರು ಕೊಡಲು ಸಿದ್ಧ ಎಂದು ಯಡಿಯೂರಪ್ಪಗೆ ಬರೆದ ಪತ್ರದಲ್ಲಿ ಪರಿಕ್ಕರ್ ತಿಳಿಸಿದ್ದಾರೆ.

## ಇನ್ಫೋಸಿಸ್ ಬಿರುಕು

ಐ.ಟಿ ಕ್ಷೇತ್ರದ ದಿಗ್ಗಜ ಸಂಸ್ಥೆ, ಸಾವಿರಾರು ಜನರಿಗೆ ಉದ್ಯೋಗ ಕೊಟ್ಟಿರುವ ಇನ್ಫೋಸಿಸ್ ಸಂಸ್ಥೆಯಲ್ಲಿ ಇಡೀ ವರ್ಷ ನಡೆದ ರಾಜೀನಾಮೆ, ಸಿಇಒಗಳ ಬದಲಾವಣೆ ಪ್ರಮುಖ ವಿದ್ಯಮಾನಗಳಲ್ಲಿ ಒಂದು. ಸಿಇಒ ಆಗಿದ್ದ ವಿಶಾಲ್ ಸಿಕ್ಕ ರಾಜೀನಾಮೆ ಮತ್ತು ಅವರು ಹೊರಹಾಕಿದ ಸಂಗತಿಗಳು ಇನ್ಫೋಸಿಸ್ ನಲ್ಲಿ ಕಂಪನ ಮೂಡಿಸಿದವು. ಅದಕ್ಕೆ ಎದುರಾಗಿ ಸಂಸ್ಥೆಯ ಸ್ಥಾಪಕರಲ್ಲಿ ಒಬ್ಬರಾದ ಎನ್. ಆರ್. ನಾರಾಯಣಮೂರ್ತಿ ಪ್ರತ್ಯಾರೋಪ ಮಾಡಿದರು. ಸಿಇಒಗಳು, ಮುಖ್ಯಸ್ಥರ ಬದಲಾವಣೆ, ಷೇರುಪೇಟೆಯ ಮೇಲೆ ಬೀರಿದ ಪರಿಣಾಮಗಳು ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಕಾಡಿದವು.